ಸಾಕ್ಷಿಯಾಗಬಹುದು. ಏಕೆಂದರೆ ಇದೇ ಆರ್ಯ ಕಣಿವೆಯಲ್ಲಿ ಇತ್ತೀಚೆಗೆ ಮತ್ತೊಂದು ವಿಶೇಷ ಯಾನ ನಡೆಯುತ್ತಿದೆ ಎಂಬ ಮಾತು ಕೇಳಿಬರುತ್ತಿದೆ. **Pregnancy Tourism** ಅಥವಾ 'ಗರ್ಭಧಾರಣಪ್ರವಾಸ' ಎಂದು ಕರೆಸಿಕೊಳ್ಳುವ ಈ ಪ್ರವಾಸದ ಯಾತ್ರಾರ್ತಿಗಳು ಯುರೋಪಿನ ಹೆಣ್ಣುಮಕ್ಕಳು. ಅವರು ಈ ಕಣಿವೆಗೆ ಬಂದು ವಾರಗಳ ಕಾಲ ಇಲ್ಲಿಯೆ ನೆಲೆಸಿ, ಇಲ್ಲಿನ ಗಂಡಸರಿಂದ ಗರ್ಭ ಧರಿಸಿ, ತಾವು ಆರ್ಯವೀರ್ಯದ ಗರ್ಭ ಧರಿಸಿರುವೆವು ಎಂದು ಹೆಮ್ಮೆಯಿಂದ ಬೀಗುತ್ತ ಹಿಂದಿರುಗುತ್ತಿದ್ದಾರೆ ಎಂದು ಕೇಳಿದ್ದೇನೆ.

ಇನ್ನು ಈ ಕಣಿವೆಯ ರಕ್ತನಿಧಿಯ ಬಗ್ಗೆ ಒಂದು ಕೊನೆಯ ಮಾತು. ಇಲ್ಲಿನ ನಿವಾಸಿಗಳ ಆರ್ಯತನ ಬಹುಶಃ ಯುರೋಪಿನ ನಂಬಿಕೆಯ ಪರಿಣಾಮವಷ್ಟೆ ಹೊರತು ಅದು ಆರ್ಯಸತ್ಯವಾಗಲಿ, ಅರಿವಿನ ಸತ್ಯವಾಗಲಿ ಅಲ್ಲ ಎಂದು ನನ್ನ ಭಾವನೆ. ಈ ಕಣಿವೆಯ ರಕ್ತನಿಧಿ ಸಾವಿರಾರು ವರ್ಷಗಳಿಂದ ನಮ್ಮ ಅಜ್ಜಿಯಂತಹ ಅದೆಷ್ಟೋ ಜನರ ವಿಚಿತ್ರ ಬದುಕುಗಳ ಪರಿಣಾಮವಾಗಿರಲು ಸಾಧ್ಯ. ನಮ್ಮ ಕಣಿವೆಯು ಬಹುಶಃ ಅಂತಹ ನೂರಾರು ರಹಸ್ಯಗಳ ಖನಿಜ. ಹಾಗೆಂದೆ ಇದು ಇಂದಿಗೂ ಎಲ್ಲರನ್ನೂ ಆಕರ್ಷಿಸುತ್ತಿದೆ ಎನ್ನಬಹುದು.

ಇಂತೀ ನಿಮ್ಮ ಪ್ರೀತಿಯ<br>ದಿಂಗ್ಸೆ.'

ಅವರ ಪತ್ರದಿಂದ ನನ್ನ ಹಲವಾರು ಪ್ರಶ್ನೆಗಳಿಗೆ ಉತ್ತರ ದೊರೆತಿತ್ತು. ಅವಕಾಶವಾದರೆ ಆರ್ಯ ಕಣಿವೆಗೆ ಮತ್ತೆ ಹೋಗಿ ಬರುವ ಆಸೆ ಮತ್ತೆ ಮೂಡಿತ್ತು.

**(ಮುಗಿಯಿತು)**

## ಹೆಚ್ಚಿನ ಓದು/ ಮಾಹಿತಿಗೆ ಪೂರಕ ಪಠ್ಯ ಮತ್ತು ಅಂತರ್ಜಾಲ ತಾಣಗಳು:

### ಪುಸ್ತಕ ಮತ್ತು ಪತ್ರಿಕೆಗಳು:


- ಗಣೇಶಯ್ಯ ಕೆ.ಎನ್. 2016, ಶಿಲಾಕುಲ ವಲಸೆ. ಅಂಕಿತ ಪ್ರಕಾಶನ, ಬೆಂಗಳೂರು.
- ಶಂಕರಪ್ಪ ತೋರಣಗಲ್, 2014, ಆರ್ಯರಿಗಾಗಿ ಹುಡುಕಾಟ: ಹೊರಗೆ, ಒಳಗೆ. ಕಾವ್ಯಕಲಾ ಪ್ರಕಾಶನ, ಬೆಂಗಳೂರು.
- **Baldizzoni, Tiziana and Gianni (1994). Tibet: Journey to the Forbidden City. White Star S.r.l., Vercelli, Italy. American edition (1996) by Stewart, Tabori & Chang, New York N.Y.**
- **Burleigh, Michael, Wippermann, Wolfgang, 1991, The Racial State: Germany 19331945. Cambridge University Press, Cambridge.**
- **Dales, G F, 1964, The Mythical Massacre at Mohejodaro. Expedition,6:3643**
- **Danino, M., 2010, The Lost River: On the trail of Sarasvati. Penguin Books, New Delhi.**
- **Davies Norman, 2006, Europe at War: 19391945 : No Simple Victory. Macmillan.**
- **Hale Christopher, 2004, Himmler's Crusade: The true story of the 1938 Nazi**